ಕರ್ನಾಟಕ ವಿಧಾನಸಭೆ

ಬುಧವಾರ 12ನೇ ಏಪ್ರಿಲ್ 2000ದಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗೆ 11. 10ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು ಪೀಠವನ್ನು ಅಲಂಕರಿಸಿದ್ದರು

1. ಅಧ್ಯಕ್ಷರ ಅಪ್ಪಣೆ ಮೇರೆಗೆ

ಹುಮ್ನಾಬಾದ್ ತಾಲ್ಲೂಕಿನಲ್ಲಿ ನಡೆದ ನರಬಲಿ ವಿಷಯದ ಬಗ್ಗೆ ಚರ್ಚಿಸಲು ಅನುಮತಿ ಕೋರಿಕೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನಲ್ಲಿ ನಡೆದ ನರಬಲಿ ವಿಷಯದ ಬಗ್ಗೆ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಟ್ಟಿದ್ದೇವೆ.

ಅಧ್ಯಕ್ಷರು : ಮೊದಲು ಪ್ರಶ್ನೋತ್ತರ ವೇಳೆ ಆಗಲಿ. ಆಮೇಲೆ ನಾವು ಅದನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೆ ಈಗ ಕ್ವೆಶ್ಚನ್ ಹವರ್ ತೆಗೆದುಕೊಳ್ಳೋಣ. ಕ್ವೆಶ್ಚನ್ ಹವರ್ ನಮ್ಮ ಶಾಸಕರ ಹಕ್ಕು. ಅದನ್ನು ಮೊಟಕ ಮಾಡಬೇಕು ಎನ್ನತಕ್ಕ ಉದ್ದೇಶ ನಮಗ್ಯಾರಿಗೂ ಇಲ್ಲ. ಬಹುತೇಕ ಜನ ಮಾನ್ಯ ಶಾಸಕರುಗಳು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ಪ್ರಶ್ನೆಗಳನ್ನು ಕೇಳುತ್ತಾರೆ. ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಇದನ್ನು ನಾವು ಅಡ್ಜರ್ನ್‌ಮೆಂಟ್ ಮೋಷನ್ ಫಾರ್ಮ್ ಮೇಲೆ ಮಾಡಬೇಕು ಎನ್ನತಕ್ಕದ್ದು ಏನೂ ಇಲ್ಲ. ಈ ಬಗ್ಗೆ ನಾವು ಏಕೆ ನೋಟೀಸ್ ಕೊಟ್ಟಿದ್ದೇವೆಂದರೆ, ರೂಲ್ಸ್ ಪುಸ್ತಕದಲ್ಲಿ ಬೇರೆಯದಕ್ಕೆ ಅವಕಾಶ ಇರುವುದಿಲ್ಲ ಎನ್ನತಕ್ಕ ದೃಷ್ಟಿಯಿಂದ ನಾವು ಕೊಟ್ಟಿದ್ದೇವೆ. ದಯಮಾಡಿ ಆ ವಿಚಾರ ಈ ಸದನಕ್ಕೆ ಸಂಬಂಧಪಟ್ಟಿರತಕ್ಕದ್ದು. ಈ ಸರ್ಕಾರಕ್ಕಿಂತ ಹೆಚ್ಚಾಗಿ ಆ ಜನರಿಗೆ ಸಂಬಂಧಪಟ್ಟಿರತಕ್ಕದ್ದು ಮತ್ತು ಎನ್‌ಟೈರ್ ಬೀದರ್ ಜಿಲ್ಲೆಯಲ್ಲಿ ಜನ ಭಯಗ್ರಸ್ಥರಾಗಿದ್ದಾರೆ. ಆದ್ದರಿಂದ, ಇದರ ಬಗ್ಗೆ ಚರ್ಚೆಗೆ ಪ್ರಶ್ನೋತ್ತರ ವೇಳೆ ಮುಗಿದ ತಕ್ಷಣ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ರೂಲ್ 69ರ ಪ್ರಕಾರ ಇದಕ್ಕೆ ಅವಕಾಶ ಕೊಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆದರೆ, ಇದಕ್ಕೆ ಟೈಮ್ ಲಿಮಿಟ್ ಹಾಕುವುದು ಬೇಡ.

ಶ್ರೀ ಡಿ.ಬಿ. ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೇ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ತಮಗೆ ಬರುತ್ತದೆ. ಅದರ ಒಂದು ಕಾಪಿ ನಮಗೆ ಬರುವುದಿಲ್ಲ. ಈಗ ಉಳಿದಿದ್ದಕ್ಕೆಲ್ಲಾ ಕಾಪಿ ಬರುವುದಿಲ್ಲ ಎಂದು ಹೇಳುತ್ತಾರೆ, ಆ ಕಡೆ ಕುಳಿತಿರುವ ನಮ್ಮ ಸ್ನೇಹಿತರುಗಳು

ಶ್ರೀ ಎಸ್. ಸುರೇಶ್ ಕುಮಾರ್ : ನಾವು ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಡುವಾಗ ಅದರ ನಾಲ್ಕು ಪ್ರತಿಗಳನ್ನು ಕೊಡುತ್ತೇವೆ.

ಶ್ರೀ ಡಿ.ಬಿ.ಚಂದ್ರೇಗೌಡ : ಅದು ನಮಗೆ ಬಂದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಸಭಾನಾಯಕರಿಗೆ ಹಾಗೂ ಸಂಬಂಧಪಟ್ಟ ತಮಗೆ ಎಲ್ಲರಿಗೂ ನಾವು ಅದರ ಪ್ರತಿಯನ್ನು ಕೊಟ್ಟಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದು ನಮಗೆ ಬಂದಿಲ್ಲ. ನೀವು ಪ್ರತಿ ಸಲ ಗಲಾಟೆ ಮಾಡುತ್ತೀರಿ. ನಮಗೆ ಬರದೇ ಇದ್ದಾಗ ನಾವು ಗಲಾಟೆ ಮಾಡಬಾರದೇ?

ಶ್ರೀ ಪಿ.ಜಿ.ಆರ್.ಸಿಂಧ್ಯ : ಕ್ವೆಶ್ಚನ್ ಹವರ್ ಆದ ಮೇಲೆ ಸಬ್ಮಿಷನ್‌ಗೆ ಒಂದು ಅವಕಾಶ ಮಾಡಿಕೊಡಿ. ಆ ಮೇಲೆ ತಾವು ತೀರ್ಮಾನ ಮಾಡಿ.

ಅಧ್ಯಕ್ಷರು : ಅದರ ಕಾಪಿ ಬಂತು. ಈಗ ತಯಾರು ಆಗಲಿ. ಆದರೆ ರಿಪ್ಲೈಯನ್ನು ಅವರು ಸರಿಸಿಕೊಳ್ಳಬೇಕಲ್ಲ!

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಗೃಹ ಮಂತ್ರಿಗಳು ಇದಕ್ಕೆ ಉತ್ತರವನ್ನು ಕೊಡಬೇಕಾಗಿರತಕ್ಕವರು. ನಾವು ಸಂಬಂಧಪಟ್ಟ ಗೃಹ ಮಂತ್ರಿಗಳಿಗೆ ತಿಳಿಸಿದ್ದೇವೆ ಮತ್ತು ನೋಟೀಸನ್ನು ಸಹ ಕಳಿಸಿದ್ದೇವೆ.

ಅಧ್ಯಕ್ಷರು : ಈಗ ಒಂದು ಪ್ರಶ್ನೆ ಏನು ಅಂದರೆ, ಒಂದು ಗಂಟೆಯಲ್ಲಿ ಅವರು ರಿಪ್ಲೈ ತರಿಸಿಕೊಳ್ಳುವುದಕ್ಕೆ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಕ್ವೆಶ್ಚನ್ ಹವರ್ ಆದಮೇಲೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ನೀವು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್‌ಗೆ ಕಳಿಸಿ. ಅಷ್ಟರೊಳಗೆ ಅವರು ಹೋಮ್ ಮಿನಿಸ್ಟರ್‌ಗೆ ಕಳಿಸಿ ಏನಾದರೂ ಮೆಸೇಜ್ ತರಿಸುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್(ಮಾನ್ಯ ವಿರೋಧ ಪಕ್ಷದ ನಾಯಕರು) : ನಾವು ಸಂಬಂಧಪಟ್ಟ ಎಲ್ಲಗೂ ನೋಟೀಸ್ ಕಳಿಸಿದ್ದೇವೆ. ಅದಕ್ಕೆ ಕಛೇರಿಯಿಂದ ಏನಾಗಿದೆ ಎಂಬುದು ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಇಲ್ಲ ಏನಾಗುತ್ತದೆ ಎನ್ನುವುದನ್ನು ನಾನು ಹೇಳುತ್ತೇನೆ. ಸದನ ಪ್ರಾರಂಭವಾಗುವುದಕ್ಕೆ ಒಂದು ಗಂಟೆ ಮುಂಚೆ ಬಂದು ನಾವು ನೋಟೀಸ್ ಕೊಡಬೇಕು. ಅಧಿಕೃತ ವಿರೋಧ ಪಕ್ಷದವರೂ ಸಹ ತಂದು ಕೊಡುತ್ತಾರೆ. ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಡುವಾಗ ಒಬ್ಬ ಮೆಂಬರ್ ಅಥವಾ ಇಬ್ಬರು ಮೆಂಬರ್‌ಗಳು ಅದಕ್ಕೆ ಸಹಿ ಮಾಡಿದರೂ ಸಾಕು. ತಮ್ಮ ಕಛೇರಿಗೆ ನಾವು ತೆಗೆದುಕೊಂಡು ಕೊಡುತ್ತೇವೆ. ಸಂಬಂಧಪಟ್ಟ ಮಂತ್ರಿಗಳ ಕಛೇರಿಗಳು ಕೆಲವು ಸಾರಿ ತೆಗೆದಿರುವುದಿಲ್ಲ ಮತ್ತು ಅಲ್ಲಿ ಜವಾಬ್ದಾರಿ ಇರತಕ್ಕ ಜನಗಳೂ ಸಹಿತ ಕೆಲವು ಸಾರಿ ಇರುವುದಿಲ್ಲ. ನಮ್ಮಂಥವರು ಹೋಗಿ ಅಲ್ಲಿ ನಿಂತುಕೊಂಡು ಕೊಡೋಣ ಎಂದರೆ ಯಾರು ಕೈಗೆ ಕೊಡುವುದು? ನಾವು ಪ್ಯೂನ್ ಕೈಯಲ್ಲಿ ಕೊಟ್ಟು ಬಂದಿರತಕ್ಕ ಪ್ರಸಂಗಗಳೂ ಸಹಿತ ಇವೆ. ಅದರಿಂದಾಗಿ ಅಧ್ಯಕ್ಷರು ತಾವು ಇದರ ಬಗ್ಗೆ ಒಂದು ವ್ಯವಸ್ಥೆಮಾಡಬೇಕು. ಸಂಬಂಧಪಟ್ಟ ಮಂತ್ರಿಗಳಿಗೆ ಕೊಡುವುದಕ್ಕೆ ತಮ್ಮ ಕಛೇರಿಯಿಂದಲೋ ಅಥವಾ ಮತ್ತೊಂದು ಕಡೆಯಿಂದಲೋ ವ್ಯವಸ್ಥೆ ಮಾಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಅವರಿನ್ನೂ ಹಳೆಯ ಗುಂಗಿನಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ಈಗ ಸಮಯ 11.15 ಆಯಿತು. ತಾವು ಒಬ್ಬರನ್ನು ಬಿಟ್ಟರೆ ಮೊದಲನೇ ಸಾಲಿನಲ್ಲಿ ಕುಳಿತುಕೊಳ್ಳುವ ಸಚಿವ ಮಹನೀಯರುಗಳು ಯಾರೂ ಸಹಿತ ಸದನಕ್ಕೆ ಬಂದಿಲ್ಲ. ಪಾಪ! ಮಾನ್ಯ ಮುಖ್ಯಮಂತ್ರಿಗಳು ಒಬ್ಬರು ಬಂದು ಕುಳಿತುಕೊಳ್ಳುತ್ತಾರೆ ಎನ್ನುವುದು ಬಿಟ್ಟರೆ ಯಾರು ಬರುತ್ತಾರೆ? ದಯವಿಟ್ಟು ಹೇಳಿ. ಕ್ವೆಶ್ಚನ್ ಹವರ್‌ನಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಬರುವುದಿಲ್ಲ ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ತಾವೇ ಇಲ್ಲಿ ಮಂತ್ರಿಗಳು ಅನುಸರಿಸುತ್ತಿರುವ ಧೋರಣೆಯನ್ನು ಆ ಸ್ಥಾನದಿಂದ ಕುಳಿತುಕೊಂಡು ಖಂಡನೆ ಮಾಡಿರತಕ್ಕದ್ದೂ ಉಂಟು.

ಅಧ್ಯಕ್ಷರು : ಇವತ್ತು ಎಲ್ಲಾ ಮಂತ್ರಿಗಳೂ ಇದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಅಡ್ಜರ್ನ್‌ಮೆಂಟ್ ಮೋಷನ್ ಫಾರ್ಮ ತಲುಪಲಿಲ್ಲ ಎನ್ನುವುದಕ್ಕಾಗಿ ಇದರ ಕಛೇರಿಯಲ್ಲಿ ಏನಾದರೂ ತಪ್ಪು ಇರಬಹುದು ಅಷ್ಟೇ ಹೊರತು ನಮ್ಮಿಂದೇನೂ ತಪ್ಪಾಗಿಲ್ಲ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ ಆ ನೋಟೀಸ್ ತಲುಪಿದೆ.

2. ಅಧ್ಯಕ್ಷರ 69ನೇ ಹುಟ್ಟು ಹಬ್ಬಕ್ಕೆ ಶುಭ ಹಾರೈಕೆ

ಶ್ರೀ ಡಿ.ಬಿ. ಸದಾನಂದ ಗೌಡ : ನಾನು ವಿಶೇಷವಾಗಿ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾವ ಮಾಡಬೇಕು. ನಮ್ಮ ಸದನದ ಅತ್ಯುನ್ನತ ಸ್ಥಾನದಲ್ಲಿ ಕುಳಿತಂಥ ಮಾನ್ಯ ಅಧ್ಯಕ್ಷರು ತಮ್ಮ 69ನೇ ಹುಟ್ಟು ಹಬ್ಬವನ್ನು ಇವತ್ತು ಆಚರಿಸುತ್ತಾರೆಂದು ನಮಗೆಲ್ಲರಿಗೂ ತಿಳಿದು ಬಂತು. ಇಡೀ ಸದನದ ಪರವಾಗಿ ತಮಗೆ ಆ ದೇವರು ಇನ್ನೂ ಆಯುರಾರೋಗ್ಯ, ಐಶ್ವರ್ಯ ಹಾಗೂ ಸಕಲ ಭಾಗ್ಯಗಳನ್ನು ಕೊಡಲಿ ಹಾಗೂ ಸ್ಥಾನಗಳನ್ನು ದೇವರು ಕರುಣಿಸಲಿ ಎಂದು ಹೇಳಿ ಇಡೀ ಸದನದ ಪರವಾಗಿ ನಾನು ತಮಗೆ ಹಾರೈಸುತ್ತೇನೆ.

ಅಧ್ಯಕ್ಷರು : ಅದು ನನಗೇ ಗೊತ್ತಿರಲಿಲ್ಲ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋದ ಪಕ್ಷದ ನಾಯಕರು) : ಮಾನ್ಯ ಸದಾನಂದ ಗೌಡರು ಇಲ್ಲಿ ಏನು ವಿಚಾರ ಪ್ರಸ್ತಾಪ ಮಾಡಿದ್ದಾರೆ ಹಾಗೆಯೆ ತಮಗೆ ಹುಟ್ಟುಹಬ್ಬದ ಶುಭಾಶಯಗಳನ್ನು ನಾವೆಲ್ಲರೂ ಕೋರುತ್ತೇವೆ. ಪ್ರತಿಪಕ್ಷದ ಎಲ್ಲಾ ಸದಸ್ಯರೂ ಕೂಡಿಕೊಂಡು ತಮಗೆ ಶುಭಾಶಯಗಳನ್ನು ಕೋರುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಮ್ಮದು ಇವತ್ತು ಹುಟ್ಟು ಹಬ್ಬ ಎಂದು ನನಗೂ ಗೊತ್ತಿರಲಿಲ್ಲ!

ಅಧ್ಯಕ್ಷರು : ಅದು ನನಗೂ ಗೊತ್ತಿರಲಿಲ್ಲ; ಅವರು 'who is who' ಪುಸ್ತಕ ನೋಡಿಕೊಂಡು ಬಂದು ಹೇಳುತ್ತಿದ್ದಾರೆ ಅಷ್ಟೇ.